ಈ) ಮಕ್ಕಳು ಅಪ್ರಾಪ್ತರು ಇರುವಾಗ ಅವರ ಹೆಸರಿನಲ್ಲಿ ಖರೀದಿ ಮಾಡಿದ ಭೂಮಿ ತಂದೆ ಹಿಡುವಳಿಯಲ್ಲಿ ಸೇರುವುದಿಲ್ಲವೇ?

ಉ) ಈ ಪ್ರಕಾರ ಕಾನೂನು ಬಾಹಿರವಾದರೆ ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮಿರ್ಯಾಣ ಗ್ರಾಮದ ಸರ್ವೆ ನಂ. 149/1 ರಲ್ಲಿ 8 ಎಕರೆ ಶ್ರೀ ಕಾಶಿನಾಥ್ ಎಂಬುವರರಿಗೆ ಅವರ ಅಪ್ರಯಸ್ಥ ಮಗನಿಗೆ ಕೊಡಿ ಹೆಚ್ಚು ಭೂಮಿ ಇದ್ದರೆ ಸಹ ಪುರಾತನ ಕಾಲದಲ್ಲಿ ಇರುವ ಹಾದಿಯನ್ನು ಕಡೆಗಣಿಸಿ ಸ್ಥಳೀಯ ಅಧಿಕಾರಿಗಳ ವರದಿಯನ್ನು ಲೆಕ್ಕಿಸದೆ ಗುತ್ತಿಗೆ ನೀಡಿದ್ದೇಕೆ?

ಊ) ಕಾನೂನು ಪ್ರಕಾರ ಇದನ್ನು ಸರಿಪಡಿಸಬಹುದೆ?

ಋ) ಮಿರ್ಯಾಣ ಗ್ರಾಮದ ರೈತರಿಗೆ ಈ ಹಾದಿಯನ್ನು ಸರ್ಕಾರಿ ಹಾದಿಯೆಂದು ಘೋಷಿಸಿ ರೈತರಿಗೆ ತೊಂದರೆಯಾಗದಂತೆ ವ್ಯವಸ್ಥೆ ಮಾಡುವುದು ಯಾವಾಗ.

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

ಅ) ಇಲ್ಲ.

ಆ) ಕಲ್ಲುಗಣಿ ಗುತ್ತಿಗೆ ನೀಡುವುದಕ್ಕೆ ಭೂಮಿತಿ ಹಿಡುವಳಿ ಮಿತಿ ಅನ್ವಯಿಸುವುದಿಲ್ಲ. ಆದ್ದರಿಂದ ಕೊಡಬಹುದು.

ಇ) ಅಂತಹ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಕಲ್ಲುಗಣಿ ಮಾಡಲು ಷರತ್ತುಗಳನ್ನು ಒಳಗೂಡಿಸಿ ಗುತ್ತಿಗೆ ನೀಡಬಹುದು.

ಈ) ಕಲ್ಲುಗಣಿ ಗುತ್ತಿಗೆಗೆ ಭೂ ಹಿಡುವಳಿ ಮಿತಿ ಅನ್ವಯಿಸುವುದಿಲ್ಲವಾದ್ದರಿಂದ ಇದ್ದಕೆ ಉತ್ತರ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಸರಿಪಡಿಸುವುದು.

ಋ) ರೈತರಿಗೆ ಹಾದಿಗೆ ತೊಂದರೆಯಾಗಿದ್ದರೆ ಆ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗುವುದು.

ಚಿತ್ತಾಪುರ ತಾಲ್ಲೂಕಿನ ಅಳ್ಳಹಳ್ಳಿ ಆಯುರ್ವೇದಿಕ ಆಸ್ಪತ್ರೆಯ ವೈದ್ಯಾಧಿಕಾರಿಯ ಗೈರು ಹಾಜರಿ.

3715 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಅಳ್ಳಹಳ್ಳಿ ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿಯವರ ಗೈರು ಹಾಜರಿಯಿಂದ ಗ್ರಾಮದ ಜನರು ಚಿಕಿತ್ಸೆಗಾಗಿ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ, ಬದಲಿ ವ್ಯವಸ್ಥೆ ಮಾಡದಿರಲು ಕಾರಣವೇನು. ಒಂದು ಪಕ್ಷ ಅನಧಿಕೃತವಾಗಿ ಗೈರು ಹಾಜರಾಗಿದ್ದಲ್ಲಿ ಸರ್ಕಾರವು ಇವರ ಮೇಲೆ ತೆಗೆದುಕೊಂಡಿರುವ ಕ್ರಮವೇನು?

ಇ) ಕಳೆದ ಸ್ವಾತಂತ್ರ್ಯ ದಿನೋತ್ಸವದಂದು ಈ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯವರು ಗೈರು ಹಾಜರಿದ್ದ ಕಾರಣವೇನು?

ಈ) ಅನಧಿಕೃತವಾಗಿ ಗೈರುಹಾಜರಿದ್ದ ಆಯುರ್ವೇದ ವೈದ್ಯಾಧಿಕಾರಿಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮವೇನು? ಹಾಗೂ ವೈದ್ಯಾಧಿಕಾರಿಯ ಬದಲಿ ವ್ಯವಸ್ಥೆಯನ್ನು ಎಂದಿನಿಂದ ಮಾಡಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ಇಲ್ಲ. ಡಾ: ಎನ್. ಮೋಹನ್‌ರಾವ್ ಎಂಬುವವರು ದಿನಾಂಕ 28-7-90ರಿಂದ ಸದರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಉದ್ಭವಿಸುವುದಿಲ್ಲ.

ಇ) ದಿನಾಂಕ 14-8-1991ರಂದು ಒಂದು ದಿವಸದ ಸಾಂದರ್ಭಿಕ ರಜೆ ಮಂಜೂರಾತಿಯೊಂದಿಗೆ ಹಾಗೂ ದಿನಾಂಕ 15-8-91ರಂದು ಅನುಮತಿ ರಜೆಯೊಂದಿಗೆ ತೆರಳಿದ್ದರು.

ಈ) ಉದ್ಭವಿಸುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿರುವ ಮಹಿಳಾ ವೈದ್ಯರು ಮತ್ತು ಸಿಬ್ಬಂದಿಗೆ ವಿಶೇಷ ಭತ್ಯೆ.

3716 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವೈದ್ಯರು ಹಾಗೂ ಇತರೆ ವೈದ್ಯಕೀಯ ಸಂಬಂಧ ವರ್ಗಕ್ಕೆ ಸೇರಿದವರು ಎಷ್ಟು ಜನರಿದ್ದಾರೆ?

ಆ) ಅವರಿಗೆ ವಿಶೇಷ ಭತ್ಯೆ ಕೊಡುವ ಯೋಜನೆ ಸರ್ಕಾರಕ್ಕೆ ಇದೆಯೇ?

ಇ) ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 1) ಸರ್ಕಾರಿ ವೈದ್ಯರ ಸಂಖ್ಯೆ : 122

2) ಇತರೆ ವೈದ್ಯಕೀಯ ಸಂಬಂಧ ವರ್ಗದವರು : 805

ಒಟ್ಟು : 927

ಆ) ಹೌದು.

ಇ) ಕುಷ್ಠರೋಗ, ಮಲೇರಿಯಾ, ಫೈಲೇರಿಯಾ, ಕ್ಷಯ, ಸ್ಮಾಲ್ ಪಾಕ್ಸ್, ಯೋಜನೆ ಅಡಿಯಲ್ಲಿ ಕಾರ್ಯ ನಿರ್ವಹಿಸುವ ವೈದ್ಯಕೀಯ ಸಂಬಂಧಪಟ್ಟವರಿಗೆ ಅವರ ವೇತನದ ಶ್ರೇಣಿ ಆಧಾರದ ಮೇಲೆ ಶೇಕಡ 4 ರಷ್ಟು ವಿಶೇಷ ಭತ್ಯೆ ಕೊಡುವ ಯೋಜನೆ ಸರ್ಕಾರಿ ಆದೇಶದ ದಿನಾಂಕ 20-5-80 ರಂತೆ ಇದೆ.

ಕುಂದಾಪುರ ತಾಲ್ಲೂಕಿನ ವಿದ್ಯಾರ್ಥಿನಿಲಯಗಳಲ್ಲಿ ಸಂಖ್ಯೆ ಹೆಚ್ಚಿಸುವ ಬಗ್ಗೆ.

3689 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕುಂದಾಪುರ ತಾಲ್ಲೂಕಿನ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಮತ್ತು ಹಿಂದುಳಿದ ವರ್ಗಗಳ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸೇರ್ಪಡೆ ಸಂಖ್ಯೆ ತುಂಬಾ ಇದ್ದು ಸಂಖ್ಯೆ ಹೆಚ್ಚಿಸಲು ಬೇಡಿಕೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಅಲ್ಲಿ ಹೆಚ್ಚಿಗೆ ಸ್ಥಳಾವಕಾಶ ಕಲ್ಪಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?